ಪ್ರೌಢ ವಿಭಾಗದ ಮಕ್ಕಳ ಸಂಖ್ಯೆ	-	1369
ಕಾಲೇಜು ವಿಭಾಗದ ಮಕ್ಕಳ ಸಂಖ್ಯೆ	-	95
ಒಟ್ಟು	-	**1594**

ಅ) ಈ ವಿದ್ಯಾ ಸಂಸ್ಥೆಯಲ್ಲಿ ಸ್ಥಳದ ಹಾಗೂ ಮೈದಾನದ ಅಭಾವವಿರುತ್ತದೆ.

ಆ) ಬಂದಿದೆ.

ಈ) ಈ ಕಾಲೇಜು ಆವರಣದಲ್ಲಿ ಸರ್ಕಾರಿ ಉರ್ದು ಪ್ರೌಢಶಾಲೆ ಕಟ್ಟಲು ಅಭಿಪ್ರಾಯ ತೆಗೆದಿರುತ್ತಾರೆ. ಆದರೆ ಪ್ರಾಚಾರ್ಯರಿಂದ ಅನುಮತಿಯನ್ನು ಪಡೆದಿರುವುದಿಲ್ಲ. ಸಹ ನಿರ್ದೇಶಕರಿಂದ ಹಾಗೂಉಪಯುಕ್ತರಿಂದ ಯಾವುದೇ ಅನುಮತಿ ಆದೇಶ ನೀಡಿರುವುದಿಲ್ಲ. ಅಧ್ಯಕ್ಷರು ಜಿಲ್ಲಾ ಪಂಚಾಯಿತಿ ವಿಜಾಪುರ ಇವರ ಅಪ್ಪಣೆಯ ಮೇರೆಗೆ ಊರ್ದು ಶಾಲೆಯ ಕಟ್ಟಡ ನಿರ್ಮಿಸಲು ಪ್ರಾಚಾರ್ಯರು ಸಹಕರಿಸುತ್ತಾರೆ.

ಶಿಕ್ಷಕರ ನೇಮಕಾತಿಯಲ್ಲಿ ವಯೋಮಿತಿ ಆದವರಿಗೆ ಅನ್ಯಾಯ

343 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಯೋಮಿತಿ ಹಾಗೂ ಮೆರಿಟ್ ಆಧಾರದ ಮೇಲೆ 1995ರಲ್ಲಿ ನಡೆದ ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ವಯೋಮಿತಿ ಆಧ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವಯಸ್ಸಾದ ಅಭ್ಯರ್ಥಿಗಳು, ಈಗಿನ ಅಭ್ಯರ್ಥಿಗಳ ಮೆರಿಟ್ ಜೊತೆ ಹೋಲಿಕೆ ಮಾಡಿದರೆ ಬಹಳಷ್ಟು ಕಡಿಮೆ ಆದ ಕಾರಣ, ನೇಮಕಾತಿಗೆ ಸೌಲಭ್ಯ ಆಗಿದ್ದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಇದನ್ನು ಸರಿಪಡಿಸಿಲು 18 ರಿಂದ 45ನೇ ವಯಸ್ಸಿನವರೆಗೆ 5 ವರ್ಷದ ಕೆಟಗರಿ ಮಾಡಿದರೆ ಸರಿಯಾಗುವುದಿಲ್ಲವೇ?

ಈ) ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಕನಿಷ್ಟ 15 ರಷ್ಟು ಕ್ರಮಾಂಕ ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ. 29ವರ್ಷಗಳ ಮೇಲ್ಪಟ್ಟ ಅಭ್ಯರ್ಥಿಗಳಿಗಾಗಿಯೇ ಮೆರಿಟ್ ಆಧರಿಸಿ ವಿಶೇಷ ನೇಮಕಾತಿ ಮಾಡಲಾಗಿದೆ.

ಆ) ಇಲ್ಲ. 29ವರ್ಷಗಳ ಮೇಲ್ಪಟ್ಟವರಿಗೆ ಆಯ್ಕೆಯಲ್ಲಿ ಸಮಾನ ಅವಕಾಶ ನೀಡಲಾಗಿದೆ.

ಇ) ವಯೋಮಿತಿಯೊಂದನ್ನೇ ಆಧಾರವಾಗಿರಿಸಿ ನೇಮಕಾತಿ ಮಾಡಲು ನಿಯಮಗಳಲ್ಲಿ

ಅವಕಾಶವಿರುವುದಿಲ್ಲ. ಹಾಗೆ ಮಾಡಿದಲ್ಲಿ ಅರ್ಹತೆ ಇರುವ ಅಭ್ಯರ್ಥಿಗಳು ಅವಕಾಶ ವಂಚಿತರಾಗುತ್ತಾರೆ. ಅವರಿಗೆ ಸಮಾನ ಅವಕಾಶ ನೀಡಿದಂತಾಗುವುದಿಲ್ಲ.

ಈ) ಸಾಮಾನ್ಯ ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸಿರುವಂತೆ ನೇಮಕಾತಿಯಲ್ಲಿ ಶೇ. 5ರಷ್ಟು ಕೃಪಾಂಕ ನೀಡಿ ಗ್ರಾಮೀಣ ಅಭ್ಯರ್ಥಿಗಳ ನೇಮಕಾತಿ ಮಾಡುವುದನ್ನು ಮುಂದುವರಿಸಲಾಗಿದೆ.

1995-96ರಲ್ಲಿ ಪ್ರಾರಂಭಿಸಲಿರುವ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು

345 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) : ಮಾನ್ಯ ಉನ್ನತಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಸರ್ಕಾರದವರು ಎಷ್ಟು ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವುದು?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) 1995-96ನೇ ಶೈಕ್ಷಣಿಕ ವರ್ಷದಲ್ಲಿ ಕೇವಲ ಐನಾಪುರದಲ್ಲಿ ಮಾತ್ರ ಸರ್ಕಾರಿ ಕಾಲೇಜನ್ನು ಸ್ಥಾಪಿಸಲಾಗಿದೆ.

ಮಾಗಡಿ ಮತ್ತು ಕುದೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭ

346 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಮತ್ತು ಕುದೂರಿನಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಕೊಠಡಿ ಇಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಮಾಗಡಿ ಮತ್ತು ಕುದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಸದರಿ ಕಾಲೇಜುಗಳ ಕಟ್ಟಡಕ್ಕೆ ಅವಶ್ಯವಾದ ನಿವೇಶನ ಪಡೆದಿದ್ದು, 1996-97ನೇ ಸಾಲಿನಲ್ಲಿ ಕಟ್ಟಡಕ್ಕೆ ಬೇಕಾದ ಹಣವನ್ನು ಒದಗಿಸಿಕೊಳ್ಳಲು ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿ ವಿತರಣೆ.

347 - ಶ್ರೀ ಹೆಚ್.ಸಿ. ಬಾಲಕೃಷ್ಣ(ಮಾಗಡಿ) : ಮಾನ್ಯ ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?